# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. ನಂ. 179/2024**

ಪ್ರ.ವ.ಬೋ. ದಿನಾಂಕ - 27-11-2025

| | | | |
|---|---|---|---|
| ಸಾಕ್ಷಿದಾರರ ಹೆಸರು | - ವೆಂಕಟೇಶ | ಫ್ರಾ.ಸಾ. | - 01 |
| ತಂದೆಯ ಹೆಸರು | - ಗೋವಿಂದಪ್ಪ | ಚಾ.ಸಾ. | - 01 |
| ವಯಸ್ಸು | - 35 ವರ್ಷ | | |
| ಉದ್ಯೋಗ | - ಕೂಲಿ ಕೆಲಸ | | |
| ವಾಸ ಸ್ಥಳ | - ಹಿರಿಯೂರು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಚಾಸಾ:4 ರಿಂದ 8 ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನಗೆ ಗೊತ್ತಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುತಿಸಿದ್ದರಿಂದ ಅದನ್ನು ನಿಪಿ:1 ಎಂದು, ಸಾಕ್ಷಿಯ ಸಹಿಯನ್ನು ನಿಪಿ:1(ಎ) ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ಹಿರಿಯೂರಿನ ಗಾಂಧಿ ಸರ್ಕಲ್ ಹತ್ತಿರ ಯಾರೋ ಜಗಳಾಡುತ್ತಿದ್ದಾಗ, ಬಿಡಿಸಲು ಹೋದ ನನ್ನನ್ನು ತಳ್ಳಿದ್ದು, ನನ್ನ ತಲೆಯ ಹಿಂಭಾಗಕ್ಕೆ ಗಾಯ ಆಗಿರುತ್ತದೆ. ನಂತರ ಆಸ್ಪತ್ರೆಯಲ್ಲಿ ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ. ನಿಪಿ:1 ರಲ್ಲಿರುವ ವಿಷಯ ನನಗೆ ಗೊತ್ತಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ, ಮರು ಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ:2 ಎಂದು, ಸಾಕ್ಷಿಯ ಸಹಿಯನ್ನು ನಿಪಿ:2(ಎ) ಎಂದು ಗುರುತಿಸಲಾಯಿತು. ನಿಪಿ:2 ರಲ್ಲಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಾಲ್ಕು ಫೋಟೊಗಳನ್ನು ತೋರಿಸಲಾಗಿ, ಅವುಗಳಣ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ:3 ರಿಂದ 6 ಎಂದು ಗುರುತಿಸಲಾಯಿತು. ಯಾವ ವಿಚಾರಕ್ಕೆ ಫೋಟೊ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ದಿ. 18.5.2024 ರಂದು ರಾತ್ರಿ 7.35 ಗಂಟೆಗೆ ನನ್ನ ಸ್ನೇಹಿತ ಕಣುಮೇಶನ ಮನೆಯಲ್ಲಿ ಊಟ ಮಾಡಿ ಹಿರಿಯೂರು ನಗರದ ಕೆ.ಎಂ. ಕೊಟ್ಟಿಗೆ ನಾರಿನ ಮಿಲ್‌ನ ಹತ್ತಿರ ನಡೆದುಕೊಂಡು ಬರುತ್ತಿದ್ದಾಗ, ಆರೋಪಿಯು ನನ್ನನ್ನು ಅಡ್ಡಗಟ್ಟಿ ಸೂಳೆ ಮಗನೇ, ಬೋಳಿ ಮಗನೇ ಎಂದು ಬೈದು, ಕೈ ಕಾಲುಗಳಿಂದ ನನ್ನ ಎದೆಗೆ, ಸೊಂಟಕ್ಕೆ, ಬೆನ್ನಿಗೆ ಹೊಡೆದು, ನಂತರ ಅಲ್ಲಿಯೇ ಇದ್ದ ಕಾಡುಕಲ್ಲು ತೆಗೆದುಕೊಂಡು ನನ್ನ ತಲೆಗೆ ಹೊಡೆದು, ರಕ್ತಗಾಯಪಡಿಸಿದ ನಂತರ ಚಾಸಾ:4, 5 ಜಗಳ ಬಿಡಿಸಿದರು ಆರೋಪಿಯು ಹೋಗುವಾಗ ನನಗೆ ಪ್ರಾಣ ಬೆದರಿಕೆ ಹಾಕಿ ಹೋದ ಎಂದರೆ ಸರಿಯಲ್ಲ. ನಂತರ ದಿ. 19.5.2024 ರಂದು ಪೋಲಿಸರು ನಿಪಿ:2 ರಂತೆ ಘಟನೆಯಾದ ಸ್ಥಳದಲ್ಲಿ ಮಹಜರ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರಿಗೆ ಕಲ್ಲು ಮತ್ತು ಬಟ್ಟೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮರು ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರವಾಗಿ – ವಕೀಲರಿಂದ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

*ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ*
*ನ್ಯಾಯಾಧೀಶರು, ಚಿತ್ರದುರ್ಗ.*